ತೀರ್ಮಾನ—ಪ್ರಸಕ್ತವಾದ ಹರಿಗೋಲಿಗೋಸ್ಕರ ಹಾಲಸಾಲ್ ಡಿಸ್ಟ್ರಿಕ್ಟ್ ಫಂಡ್ ಬಡ್ಜೆಟ್ X ಮಿಸಲೇನಿಯಸ್ (o) ದೋಣಿಗಳಿಗೋಸ್ಕರ ದಾಖಲಾಗಿರುವ 150 ರೂಪಾಯಿಗಳ ಪೈಕಿ 60 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXV. ಹಾಸನ ತಾಲ್ಲೂಕು ಗ್ರಾಮದಲ್ಲಿ ಇರುವ ವೈದ್ಯಶಾಲಾ ಉಪಯೋಗಕ್ಕೋಸ್ಕರ ಅವಶ್ಯಕವಾಗಿರುವ ಸಾಮಾನುಗಳಿಗೋಸ್ಕರ 29 ರೂಪಾಯಿಗಳು ಬೇಕೆಂಬ ಹಾಸನ ತಾಲ್ಲೂಕು ಅಮಲ್ದಾರರ 3—5—09ರ ಮತ್ತು 888ನೆ ನಂಬರು ರಿಪೋರ್ಟು ಓದಲಾಯಿತು.

ತೀರ್ಮಾನ—ಅತ್ಯವಶ್ಯಕವಾದ ಸಾಮಾನು ಕೊಂಡುಕೊಳ್ಳುವದಕ್ಕೋಸ್ಕರ ಹಾಲಸಾಲ್ ಬಡ್ಜೆಟ್ಟಿನಲ್ಲಿ II ವೈದ್ಯಶಾಲೆಗಳಿಗೋಸ್ಕರ ದಾಖಲಾಗಿರುವ 1,164 ರೂಪಾಯಿಗಳ ಪೈಕಿ 12—4—0 ರೂಪಾಯಿ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XXVI. ಇದರಡಿ ಕಾಣಿಸಿರುವ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಮಿಟಿಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಗೆ ಬರಿಸಿದ ಖತ್ತುಗಳನ್ನು ಓದಲಾಯಿತು.

ಮಿ॥ ವೆಂಕಟರಾಮಯ್ಯನವರು.
,, ರಾಮಶೆಟ್ಟು.
,, ಕ್ಯಾಥರ್ಡ್ ಸಾಹೇಬರು.
,, ಐಗೂರು ಮಲ್ಲೆಗೌಡರು.

ಮಿ॥ ಹಬೀಬುಲ್ಲಾ ಸಾಹೇಬರು.
,, ಕೆಂಚರಾಯ ಶೆಟ್ಟರು.
,, ಧರಣೈಯ್ಯ ಶೆಟ್ಟರು.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XXVII. ಬರುವ ಮಿಟಿಂಗನ್ನು 1909ನೆ ಇಸವಿ ಆಗಸ್ಟು ಮಾಹೆ 9ನೆ ತಾರೀಖು ಸೋಮವಾರ ಮಧ್ಯಾಹ್ನ 1 ಘಂಟೆಗೆಂತ ತೀರ್ಮಾನಿಸಲಾಯಿತು.

ಬಿ. ಆರ್. ಡಬ್ಲ್ಯು. ವೆದರಾಲ್,
ಪ್ರೆಸಿಡೆಂಟ್.

ಇಸ್ತಿಹಾರ್.

ತಾರೀಖು 26ನೆ ಜೂ॥ 1909ನೆ ಇಸವಿ.

ಹಾಸನ ತಾಲ್ಲೂಕು ಕಸಬಾ ಹೋಬಳಿ ಜೋಡಿ ಹಂದಿನಕೆರೆ ಗ್ರಾಮವು ಜೋಡಿದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ 1909ನೆ ಇಸವಿ ಆಗಸ್ಟು 23ನೆ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1909ನೆ ಇಸವಿ ಜುಲೈ ಮಾಹೆ 8ನೆ ನುರ್ತು ಮೈಸೂರು ಗೆಜೆಟ್ಟಿನ IIನೆ ಭಾಗದ 545—546ನೆ ಪುಟಗಳನ್ನು ನೋಡತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ, ಛಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 29ನೆ ಜೂ॥ 1909.

ಲೇಟ್ ಚಿಕ್ಕಮಗಳೂರು ಅಗ್ರಿಕಲ್ಚರಲ್ ಬ್ಯಾಂಕಿನ ಬಗೆ ಮೈಸೂರು ಸರಕಾರಕ್ಕೆ ಸದರಿ ಬ್ಯಾಂಕಿನ ಮೆಂಬರುಗಳಾದ—

1. ಮಿ॥ ಅಣ್ಣಿಗಿರಿ ವಸ್ತಾರದ ಶಾನುರಾಯರು.
2. ,, ವಿ. ಜಗನ್ನಾಥರಾಯರು, ಲೇಟ್.
3. ,, ಮಂಕಾಲಗಣೇಶರಾಯರ ಕುಟುಂಬ ಸರಸ್ವತಮ್ಮ.
4. ,, ಜೆ. ಅಬ್ದುಲ್ ಖಲೀಕ್ ಸಾಬರು.
5. ,, ಟಿ. ರಾಘವೇಂದ್ರಸ್ವಾಮಿಯವರು.
6. ,, ಕರ್ಕಿಪೇಟೆ ಶಿವಪ್ಪಶೆಟ್ಟರು.
7. ,, ಶಿವಾಜಿ ರಾಮಚಂದ್ರರು.
8. ,, ಸಿ. ಖಾನವೇಗೌಡರು, ಚಿಕ್ಕಮಗಳೂರು.

ಇವರುಗಳಿಂದ ಸಲ್ಲಬೇಕಾಗಿದ್ದು ಹಾಲಿ ಬಾಕೀಲಿ ನಿಂತಿರುವ ಸಾಲದ ಪೊಬಲಗುಗಳನ್ನು ಬರಮಾಡಿಕೊಳ್ಳಲು ನಾಳೆ ಬರುವ ಸ॥ 1909ನೆ ಇಸವಿ ಸೆಪಟಂಬರು ತಾರೀಖು 10ನೆ ದಿವಿ 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಛೇರಿ ಬಳಿ, ಸದರಿಯವರುಗಳಿಂದ ಸದರಿ ಬ್ಯಾಂಕಿಗೆ ಹೊಣೆ ಮಾಡಲ್ಪಟ್ಟ ಸ್ಥಿರಸ್ವತ್ತುಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದಲಾಗಲಿ ಆ ಆಬ್ಜೆಕ್ಷನ್ಸುಗಳು ಹಿಸಲ್ಪಡುವ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ, ಸ॥ 1908ನೆ ಇಸವಿ ಜನವರಿ ತಾರೀಖು 16ನೆ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಂ. Fl. 3526-28-B,—07-15ನ್ನನುಸರಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತವೆ.

2. ಸಾಲದಬಾಕಿ, ಸ್ವತ್ತುಗಳು, ಹರಾಜ್ ಪರತ್ತುಗಳು, ಈ ತಪಶೀಲುಗಳ ಬಗ್ಗೆ ಸ॥ 1909ನೆ ಜುಲೈ ತಾರೀಖು 15ನೆ ಮೈಸೂರ ಗೆಜೆಟ್ 2ನೆ ಭಾಗದ 555, 556, 557, 558, 559, 560, 561, 562ನೆ ನಂ. ಪುಟಗಳನ್ನು ನೋಡುವದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.